ಗೊತ್ತಿಲ್ಲ. ತಾವು ಕೊಟ್ಟಂತಹ ಹಣವನ್ನು ಖರ್ಚು ಮಾಡಿರುವಂತಹ ಆಲಸಿ ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.— ತಾವು ಬೇರೆ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಯು. ಭೂಪತಿ.— ಈ ಎರಡು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವಂತಹ ಹಳ್ಳಿಗಳ ಬಗ್ಗೆ ಮಾನ್ಯ ಸಚಿವರು ಉತ್ತರಕೊಟ್ಟಿದ್ದಾರೆ. ಅದರೆ ಅದಕ್ಕಿಂತ ಕಡಿಮೆ ಜನಸಂಖ್ಯೆಯಿರುವಂತಹ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಏನಾದರೂ ಹಾಕಿಕೊಂಡಿದ್ದೀರಾ? ತಮ್ಮ ಅಂದಾಜು ಪ್ರಕಾರ ಇಂತಹ ಹಳ್ಳಿಗಳು ಎಷ್ಟು ಇವೆ ಎಂದು ತಿಳಿಸಿ. ಮಿನಿ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಮಿನಿಮಮ್ ೧೦೦೦ ಜನಸಂಖ್ಯೆಯಿರಬೇಕು. ಅದಕ್ಕಿಂತ ಕೆಳಗಡೆ ಇದ್ದರೆ ಬರುವುದಿಲ್ಲ. ೭೦೦-೮೦೦ ಜನಸಂಖ್ಯೆಯಿದ್ದರೆ ಬರುವುದಿಲ್ಲ. ಮುಂಖ್ಯವಾಗಿ ಬೋರ್‌ವೆಲ್‌ಗಳ ಮುಖಾಂತರವಾಗಿ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದೇವೆ. ಆದುದರಿಂದಾಗಿ ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಅಂತರ್‌ಜಲ ಬಹಳ ಕಡಿಮೆ ಯಾಗುತ್ತಿದೆ ಅದು ತೀರ ಕೆಳಗೆ ಹೋಗುತ್ತಿದೆ ಎಂದು ಸಂಬಂಧಪಟ್ಟ ಮಂತ್ರಿಗಳು ಮೊನ್ನೆ ಪಾರ್ಲಿಮೆಂಟಿ ನಲ್ಲಿ ಹೇಳಿದರು. ಅದರ ಬಗ್ಗೆ ಮುಂದೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೇ, ಕುಡಿಯುವ ನೀರನ್ನು ಸರಬರಾಜು ಮಾಡ ತಕ್ಕಂಥದ್ದು ಎಂದರೆ, ಕೊಳವೆ ಮುಖಾಂತರ ನೀರು ಸರಬರಾಜು ಮಾಡತಕ್ಕಂಥದ್ದು ಒಂದು ಸಣ್ಣ ಕೆರೆನೀರಿನ ಯೋಜನೆ ಮುಖಾಂತರ ಮಾಡತಕ್ಕಂಥದ್ದು ಒಂದು. ತೋಡುಬಾವಿಗಳ ಮತ್ತು ಕೊಳವೆ ಬಾವಿಗಳ ಮುಖಾಂತರ ನೀರು ಸರಬರಾಜು ಮಾಡತಕ್ಕಂಥದ್ದು. ಹಳ್ಳಕೊಳ್ಳಗಳಿಂದ ನೀರನ್ನು ಶುದ್ಧಿ ಮಾಡತಕ್ಕಂಥದ್ದು. ಈ ರೀತಿ ನಾನಾ ಯೋಜನೆಗಳನ್ನು ನಾವು ಮಾಡಿದ್ದೇವೆ, ಎಷ್ಟು ಬಟ್ಟಿ ಕಾಮಗಾರಿಗಳಾಗಿದೆ ಎಂದು ಈಗ ನನ್ನ ಹತ್ತಿರ ಒಂದೊಂದು ಗ್ರಾಮದ ಬಗ್ಗೆಯೂ ಮಾಹಿತಿ ಇಲ್ಲ. ಅದನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಈ ಅಂತರ್‌ಜಲ ಕೆಳಗೆ ಹೋಗುತ್ತಿದೆ ಎಂದು ಹೇಳಿದರು, ಈ ಮಾತು ನಿಜ. ಆದರೆ ಇದು ಸರ್ವೇಸಾಧಾರಣವಾದ ಮಾತು. ಸರ್ವೇಸಾಧಾರಣವಾಗಿ ವೈಜ್ಞಾನಿಕವಾಗಿ ಆಗತಕ್ಕಂಥದ್ದೇ. ಬೇಸಿಗೆ ಕಾಲದಲ್ಲಿ ನೀರಿನ ಬಳಕೆ ಹೆಚ್ಚಿಗೆ ಆಗುತ್ತದೆ. ಆಗ ಜಲದ ಮೂಲ ಕೆಳಗೆ ಹೋಗುತ್ತದೆ. ಆತಂಕಕಾರಿ ಪರಿಸ್ಥಿತಿಯಲ್ಲಿ ಜಲದ ಮೂಲ ಕೆಳಗೆ ಹೋಗು ತ್ತಿಲ್ಲ. ನೀರಿನ ಕೊರತೆ ಎರಡು ಮೂರು ಜಿಲ್ಲೆಗಳಲ್ಲಿ ಬಿಟ್ಟರೆ ಬೇರೆಲ್ಲೂ ಇಲ್ಲ. ಆ ಜಿಲ್ಲೆಗಳು ಎಂದರೆ ಬೀದರ್, ತುಮಕೂರು ಮತ್ತು ಕೋಲಾರ. ಬಾಕಿ ಎಲ್ಲಾ ಕಡೆ ಅಂಥ ಭಯಂಕರವಾದ ಪರಿಸ್ಥಿತಿ ಏನೂ ಇಲ್ಲ. ಆದರೂ ಕೂಡಾ ಜಲದ ಮೂಲಗಳನ್ನು ಹೆಚ್ಚಿಸಬೇಕು ಎಂದು ಅದಕ್ಕಾಗಿ ನಾವು ನೀರನ್ನು ರೀ-ಛಾರ್ಜ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಮತ್ತು ಇದರ ಬಗ್ಗೆ ಅಧ್ಯ ಯನ ಕೂಡಾ ಮಾಡಿಸುತ್ತಿದ್ದೇವೆ.

ರಾಜ್ಯ ಸರ್ಕಾರವು ಪ್ರತಿ ಜಿಲ್ಲಾ ಪರಿಷತ್‌ಗಳಿಗೆ ಬಿಡುಗಡೆ ಮಾಡಿರುವ ಹಣ

೧೪೭೦. ಶ್ರೀ ಗೊಪಾಲ ಮಂಕಂಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿ ಸುವರೇ ?

ಅ) ರಾಜ್ಯ ಸರ್ಕಾರವು ಪ್ರತಿ ಜಿಲ್ಲಾ ಪರಿಷತ್‌ಗಳಿಗೆ ಇದುವರೆಗೆ ಬಿಡುಗಡೆ ಮಾಡಿರುವ ಹಣ ವೆಷ್ಟು ? (ವಿವರ ನೀಡುವುದು)

ಆ) ಪ್ರತಿ ಜಿಲ್ಲಾಪರಿಷತ್ತುಗಳಲ್ಲಿ ಹರಿಜನ ಗಿರಿಜನರಿಗೆ ವಿಂಗಡಿಸಲಾಗಿಟ್ಟಿರುವ ಹಣ ಎಷ್ಟು ? (ವಿವರ ನೀಡುವುದು)

ಇ) ಉತ್ತರ ಕನ್ನಡ ಜಿಲ್ಲಾ ಪರಿಷತ್‌ನಲ್ಲಿ ಈಕಡಾ ೧೮ರ ಪ್ರಕಾರ ಸಿರ್ಸಿ-ಪಿದ್ದಾಪುರ ತಾಲ್ಲೂಕು ಗಳಿಗೆ ಖರ್ಚು ಮಾಡಿರುವ ಹಣ ಎಷ್ಟು ? (ಜಿಲ್ಲೆಯ ವಿವರವನ್ನು ಸಹ ನೀಡುವುದು)

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಜಿಲ್ಲಾಪರಿಷತ್ತುಗಳಿಗೆ ದಿನಾಂಕ. ೩೧-೩-೮೮ರ ವರೆಗೆ ಬಿಡುಗಡೆಯಾಗಿರುವ ಹಣದ ತಃಖ್ತೆಯನ್ನು ಅನುಬಂಧ 'ಅ' ನಲ್ಲಿ ತೋರಿಸಲಾಗಿದೆ.

ಆ) ಜಿಲ್ಲಾ ಪರಿಷತ್ತಿನ ಕಾಯಿದೆ ಪ್ರಕಾರ ಪ್ರತಿ ಜಿಲ್ಲಾ ಪರಿಷತ್ತಿನಲ್ಲಿ ಶೇಕಡಾ ೨೦ ಕ್ಕಿಂತ ಕಡಿಮೆ ಇಲ್ಲದಂತೆ ಹರಿಜನ ಗಿರಿಜನರಿಗಾಗಿ ಹಾಗೂ ಹಿಂದುಳಿದ ವರ್ಗಗಳಿಗೆ ವಿೂಸಲಾತಿಯನ್ನು ಮಾಡಲು ಅವಕಾಶ ವಿದೆ.

ಇ) ಅನುಬಂಧ 'ಅ' ನಲ್ಲಿ ಇದೆ.

ಅನುಬಂಧ-ಅ

ಜಿಲ್ಲಾಪರಿಷತ್ತುಗಳಿಗೆ ದಿನಾಂಕ ೩೧-೩-೮೮ರವರೆಗೆ ಬಿಡುಗಡೆಯಾದ ಹಣದ ತಃಖ್ತೆ

(ಲಕ್ಷ ರೂಪಾಯಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಯೋಜನೆ	ಯೋಜನೇತರ	ಒಟ್ಟು ಷರಾ
೧	ಬೆಂಗಳೂರು (ಗ್ರಾಮಾಂತರ)	೧೮೬೯.೩೨೦	೨೪೨೯.೩೪೦	೪೨೯೮.೬೬೦
೨	ಚಿತ್ರದುರ್ಗ	೨೦೩೫.೦೬೦	೨೪೨೪.೭೮೫	೪೪೫೯.೮೪೫
೩	ಕೋಲಾರ	೨೫೧೦.೧೩೦	೨೪೨೬.೨೧೦	೪೯೩೬.೩೪೦
೪	ಶಿವಮೊಗ್ಗ	೨೨೩೭.೩೪೫	೨೫೧೧.೧೮೩	೪೭೪೪.೫೨೮
೫	ತುಮಕೂರು	೨೪೬೫.೭೯೫	೨೯೪೪.೫೬೧	೫೪೩೦.೩೫೬
೬	ಮೈಸೂರು	೩೫೮೨.೨೯೮	೩೫೨೯.೨೪೮	೭೧೧೧.೫೪೬
೭	ಚಿಕ್ಕಮಗಳೂರು	೧೪೬೫.೦೭೦	೧೭೩೨.೧೧೦	೩೧೯೭.೧೪೦
೮	ದಕ್ಷಿಣ ಕನ್ನಡ	೨೪೩೮.೯೧೦	೩೫೨೯.೨೩೦	೫೯೬೪.೧೪೦
೯	ಹಾಸನ	೨೦೪೬.೦೪೦	೨೧೯೫.೧೨೬	೪೨೪೧.೧೬೬
೧೦	ಕೊಡಗು	೧೧೧೭.೪೮೯	೯೯೩.೧೪೯	೨೧೧೦.೬೩೮ (ತಾತ್ಕಾಲಿಕ)
೧೧	ಮಂಡ್ಯ	೧೬೫೮.೩೮೨	೧೯೬೭.೯೪೪	೩೬೨೬.೩೨೬
೧೨	ಬೆಳಗಾಂ	೩೧೦೬.೪೯೦	೩೩೭೪.೬೧೦	೬೪೪೧.೧೦೦
೧೩	ಬಿಜಾಪುರ	೨೬೨೭.೮೨೮	೩೪೬೮.೧೯೦	೬೦೭೬.೦೧೮
೧೪	ಧಾರವಾಡ	೩೫೭೮.೧೧೦	೪೧೮೯.೭೨೦	೭೭೬೭.೮೩೦
೧೫	ಉತ್ತರ ಕನ್ನಡ	೧೫೦೯.೯೮೦	೨೩೦೯.೫೬೦	೩೮೧೯.೫೪೦
೧೬	ಗುಲ್ಬರ್ಗ	೨೮೮೭.೦೦೦	೩೦೭೧.೦೦೦	೫೯೫೮.೦೦೦
೧೭	ಬಳ್ಳಾರಿ	೨೦೫೯.೩೦೦	೧೭೯೬.೩೩೦	೩೮೫೫.೬೩೦
೧೮	ಬೀದರ್	೧೧೨೩.೦೦೦	೧೩೪೨.೦೦೦	೨೪೬೫.೦೦೦
೧೯	ರಾಯಚೂರು	೨೨೧೨.೭೩೬	೨೪೧೩.೩೪೦	೪೬೨೬.೦೭೬
	ಒಟ್ಟು	೪೨೩೯೦.೨೮೩	೪೮೬೮೭.೬೩೬	೯೧೦೭೭.೯೧೯

ಅನುಬಂಧ–''ಆ''

ಶೇಕಡಾ ೧೮ರ ಪ್ರಕಾರ ಖರ್ಚು ಮಾಡಿರುವ ಹಣ ೧೯೮೭–೮೮ರ ಸಾಲಿನಲ್ಲಿ

ಕ್ರಮ ಸಂಖ್ಯೆ	ತಾಲ್ಲೂಕು		ಖರ್ಚು ಮಾಡಿರುವ ಹಣ
೧	ಸಿರ್ಸಿ ತಾಲ್ಲೂಕು	ರೂ.	೧೬.೨೨ ಲಕ್ಷಗಳು
೨	ಸಿದ್ದಾಪುರ ತಾಲ್ಲೂಕು	ರೂ.	೧೨.೯೬ ಲಕ್ಷಗಳು
	ಜಿಲ್ಲೆಯ ಖರ್ಚು	ರೂ.	೮೪.೮೫ ಲಕ್ಷಗಳು

ಶ್ರೀ ಗೋಪಾಲ ಮುಕುಂದ ಕಾನಡೆ.—ನೀವು ಇಲ್ಲಿ ಹರಿಜನರಿಗೆ ವಿಶೇಷವಾಗಿ ಯೋಜನೆಯಲ್ಲಿ ಹಣವನ್ನು ಇಟ್ಟಿದ್ದಿರೋ ಅಥವಾ ಯೋಜನೇತರ ಯೋಜನೆಯಲ್ಲಿ ಈ ೧೮ ಪರ್ಸೆಂಟ್‌ನ್ನು ಯೋಜನೇತರದಲ್ಲಿ ಇಟ್ಟಿದ್ದಿರೋ ಹೇಳಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಯೋಜನೇತರ ಬಾಬುಗಳ ಸಂಬಳ ಸಾರಿಗೆಗೆ ಹೋಗುತ್ತದೆ. ಶೇಕಡ ೨೦ ರಷ್ಟು ಹಣವನ್ನು ಹರಿಜನ ಗಿರಿಜನರಿಗೆ ವೆಚ್ಚ ಮಾಡಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ಈ ಯೋಜನೆಯಲ್ಲಿ ೧೫ ಕೋಟಿ ೯ ಲಕ್ಷ ಎಂದು ನೀವು ಕೊಟ್ಟಿರುವ ಅನುಬಂಧದಲ್ಲಿ ಹೇಳಿದ್ದೀರಿ. ನೀವು ೮೪ ಲಕ್ಷ ರೂಪಾಯಿಯನ್ನು, ಉತ್ತರ ಕನ್ನಡ ಜಿಲ್ಲೆಗೆ ಕೊಟ್ಟಿದ್ದೀರಿ. ಅದರಲ್ಲಿ ಸಿರಸಿಗೆ ೧೬.೨೨ ಲಕ್ಷ ರೂಪಾಯಿ, ಸಿದ್ದಾಪುರಕ್ಕೆ ೧೨.೯೬ ಲಕ್ಷ ರೂಪಾಯಿ ಎಂದು ಕೊಟ್ಟಿದ್ದೀರಿ. ಈ ೧೬.೨೨ ಲಕ್ಷ ರೂಪಾಯಿಗಳನ್ನು ಯಾವುದರ ಬಗ್ಗೆ ನೀವು ಹರಿಜನ ಗಿರಿಜನರಿಗೆ ಖರ್ಚು ಮಾಡಿದ್ದೀರಿ. ರಸ್ತೆಗಾಗಿಯೋ ಅಥವಾ ಬಾವಿಗಾಗಿಯೋ ಯಾವುದಕ್ಕೆ ತಾವು ಖರ್ಚು ಮಾಡಿದ್ದೀರಿ ? ಈ ಎರಡು ಕೋಟಿ ರೂಪಾಯಿಯಲ್ಲಿ ೧೮ ಪರ್ಸೆಂಟ್ ನಮಗೆ ಕೊಡಬೇಕಾಗುತ್ತದೆ. ನಮಗೆ ೮೪ ಲಕ್ಷ ಬಿಲ್ಲರೆ ಮಾತ್ರ ಕೊಟ್ಟಿದ್ದೀರಿ ಉಳಿದದ್ದನ್ನು ಏತಕ್ಕೆ ಕೊಟ್ಟಿಲ್ಲ?

ಶ್ರೀ ಅಬ್ದುಲ್ ನಜೀರ್ ಸಾಬ್ —ಯೋಜನೆಗೆ ಸಂಬಂಧಪಟ್ಟ ಹಾಗೆ ನಾವು ನೇರವಾಗಿ ಖರ್ಚು ಮಾಡತಕ್ಕಂಥದ್ದು ಎಂದು ನಾನು ಭಾವಿಸಿದ್ದೇವೆ. ಆದರೆ ಎನ್.ಆರ್.ಇ.ಪಿ. ಯೋಜನೆಯಡಿಯಲ್ಲಿ ನಾವು ೩೦ ಪರ್ಸೆಂಟ್ ಖರ್ಚು ಮಾಡಬೇಕು, ಆರ್.ಎಲ್.ಇ.ಜಿ.ಪಿ. ಕಾರ್ಯಕ್ರಮದಡಿಯಲ್ಲಿ ೩೦ ಪರ್ಸೆಂಟನ್ನು ಖರ್ಚು ಮಾಡಬೇಕು. ಹೀಗೆ ಬೇರೆ ಬೇರೆ ಯೋಜನೆಗಳಿಗೆ ಹಣವನ್ನು ಖರ್ಚು ಮಾಡ ಬೇಕಾದಂಥ ಕಾರ್ಯಕ್ರಮಗಳು ಇದೆ. ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚು ಮಾಡಿದ್ದೇವೆ ಎನ್ನುವ ವಿವರಗಳು ನನ್ನ ಹತ್ತಿರ ಇಲ್ಲ, ಅದನ್ನು ತರಿಸಿಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.–ನೀವು ಖರ್ಚು ಮಾಡುವಂಥ ವಿಚಾರವನ್ನು ಹೇಳುತ್ತೀರಾ? ಇಲ್ಲದೇ ಹೋದರೆ ಇದನ್ನು ಅರ್ಧ ಗಂಟೆಗೆ ಚರ್ಚೆಗೆ ಅವಕಾಶವನ್ನು ಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್,—ಡಿಮ್ಯಾಂಡ್ ಬಂದ ಮೇಲೆ ಎಷ್ಟು ಬೇಕಾದರೆ ಮಾತನಾಡಲಿ. ಉತ್ತರ ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಒಂದೊಂದು ಜಿಲ್ಲೆಗೂ ಎರಡು ಕೋಟಿ ಮೂರು ಕೋಟಿ ರೂಪಾಯಿ ಹರಿಜನರಿಗೆ ಹೆಂಚಬೇಕಾದಂಥ ಹಣ, ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟರೆ ಮಾತನಾಡುತ್ತೇನೆ.

ಅಧ್ಯಕ್ಷರು.—ಡಿಮ್ಯಾಂಡ್ ಬಂದಾಗ ಸಾಕಷ್ಟು ಅವಕಾಶ ಕೊಡುತ್ತೇನೆ, ತಾವು ದಯವಿಟ್ಟು ಕುಳಿತುಕೊಳ್ಳಿ, ಸಾಕಷ್ಟು ಸ್ಟಡಿ ಮಾಡಿಕೊಂಡು ಬಂದು ಡಿಮ್ಯಾಂಡ್ ಮೇಲೆ ಬಂದಾಗ ಮಾತನಾಡಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸಾಕಷ್ಟು ಸ್ಟಡಿ ಮಾಡಿಕೊಂಡೇ ಬಂದಿದ್ದೇನೆ.